**ಶರ್ಮ್ ಎಲ್-ಶೇಖ್ ಶಾಂತಿ ಶೃಂಗಸಭೆಗಾಗಿ ಈಜಿಪ್ಟ್‌ನ ಶರ್ಮ್ ಎಲ್-ಶೇಖ್‌ಗೆ MOS (KVS) ಭೇಟಿ (ಅಕ್ಟೋಬರ್ 13, 2025)**

ಅಕ್ಟೋಬರ್ 13, 2025

2025 ಅಕ್ಟೋಬರ್ 13 ರಂದು ಈಜಿಪ್ಟ್‌ನ ಶರ್ಮ್ ಎಲ್-ಶೇಖ್‌ನಲ್ಲಿ ನಡೆದ ಶರ್ಮ್ ಎಲ್-ಶೇಖ್ ಶಾಂತಿ ಶೃಂಗಸಭೆಯಲ್ಲಿ ವಿದೇಶಾಂಗ ವ್ಯವಹಾರಗಳು ಮತ್ತು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಖಾತೆ ರಾಜ್ಯ ಸಚಿವ ಶ್ರೀ ಕೀರ್ತಿ ವರ್ಧನ್ ಸಿಂಗ್ [MOS (KVS)] ಭಾಗವಹಿಸಿದ್ದರು. ಶೃಂಗಸಭೆಯನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಗೌರವಾನ್ವಿತ ಡೊನಾಲ್ಡ್ ಟ್ರಂಪ್ ಮತ್ತು ಈಜಿಪ್ಟ್‌ನ ಅಧ್ಯಕ್ಷ ಗೌರವಾನ್ವಿತ ಅಬ್ದೆಲ್ ಫತ್ತಾ ಅಲ್-ಸಿಸಿ ಅವರು ಜಂಟಿಯಾಗಿ ಆಯೋಜಿಸಿದ್ದರು ಮತ್ತು ಹಲವಾರು ವಿಶ್ವ ನಾಯಕರು ಇದರಲ್ಲಿ ಪಾಲ್ಗೊಂಡಿದ್ದರು.

2. ಭಾರತವು ಮಧ್ಯಪ್ರಾಚ್ಯದಲ್ಲಿ ಶಾಂತಿಯನ್ನು ಬಯಸುತ್ತದೆ ಹಾಗೂ ಸಂವಾದ ಮತ್ತು ರಾಜತಾಂತ್ರಿಕತೆಯ ಮೂಲಕ ಸಮಸ್ಯೆಗಳ ಪರಿಹಾರವನ್ನು ಪ್ರತಿಪಾದಿಸುತ್ತದೆ. ನಾವು ಅಧ್ಯಕ್ಷ ಟ್ರಂಪ್ ಅವರ ಗಾಜಾ ಶಾಂತಿ ಯೋಜನೆಯನ್ನು ಬೆಂಬಲಿಸುತ್ತೇವೆ ಮತ್ತು ಇದನ್ನು ಸಾಧಿಸುವಲ್ಲಿ ಮತ್ತು ಶಾಂತಿಯ ಹಾದಿಯನ್ನು ಮುನ್ನಡೆಸುವಲ್ಲಿ ಈಜಿಪ್ಟ್ ಮತ್ತು ಕತಾರ್‌ಗಳ ಅಮೂಲ್ಯ ಪಾತ್ರಗಳನ್ನು ಪ್ರಶಂಸಿಸುತ್ತೇವೆ.

3. ಗಾಜಾ ಪಟ್ಟಿಯಲ್ಲಿದ್ದ ಬಾಕಿ ಎಲ್ಲಾ ಒತ್ತೆಯಾಳುಗಳ ಬಿಡುಗಡೆ ಮತ್ತು ಕದನ ವಿರಾಮದ ನಂತರ ನಡೆದ ಈ ಶೃಂಗಸಭೆಯು, ಈ ಪ್ರದೇಶದಲ್ಲಿ ಶಾಶ್ವತ ಶಾಂತಿಗಾಗಿ ಅಧ್ಯಕ್ಷ ಟ್ರಂಪ್ ಅವರ ದೃಷ್ಟಿಕೋನಕ್ಕೆ ಅನುಗುಣವಾಗಿ, ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗಾಗಿ ಪ್ರಯತ್ನಗಳನ್ನು ಬಲಪಡಿಸುವ ಗುರಿಯನ್ನು ಹೊಂದಿತ್ತು.

4. ಮಾತುಕತೆಯ ಮೂಲಕ ಎರಡು ದೇಶಗಳ ಪರಿಹಾರಕ್ಕಾಗಿ ಭಾರತದ ದೀರ್ಘಕಾಲದ ಬೆಂಬಲಕ್ಕೆ ಕೂಡಾ ಇದು ಅನುಗುಣವಾಗಿದೆ. ಈ ಪ್ರದೇಶದಲ್ಲಿ ಶಾಶ್ವತ ಶಾಂತಿಗಾಗಿ ನಡೆಸುವ ಎಲ್ಲಾ ಪ್ರಯತ್ನಗಳನ್ನು ಭಾರತ ಬೆಂಬಲಿಸುತ್ತದೆ.

ಶರ್ಮ್ ಎಲ್-ಶೇಖ್

ಅಕ್ಟೋಬರ್ 13, 2025